# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

*ಎಸ್‌ಸಿ.* 137/2020

| | | |
|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಪ್ರಕಾಶ | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ನಡುಕೇರಿ ನಾಯಕ | **15.01.2025** |
| **ವಯಸ್ಸು** | ಃ **48** **ವರ್ಷ** | |
| **ವೃತ್ತಿ** | ಃ ಹಣ್ಣಿನ ವ್ಯಾಪಾರ | **ಪ್ರಾ.ಸಾ. ಃ 08** |
| **ವಾಸಸ್ಥಳ** | ಃ ಕೆ.ಜಿ.ಕೊಪ್ಪಲು | **ಚಾ.ಸಾ. ಃ 09** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ-*8* ಮಹದೇವು ನನ್ನ ತಮ್ಮನಿರುತ್ತಾನೆ. ನಾನು ಹಳೇ ಕೋರ್ಟ್ ಕಾಪೌಂಡ್ ನ ಮುಂಭಾಗದಲ್ಲಿರುವ ಮನು ವನ ಪಾರ್ಕ್ ಬಳಿ *18-20* ವರ್ಷಗಳಿಂದ ಕಟ್ ಫ್ರೂಟ್ಸ್ ವ್ಯಾಪಾರ ಮಾಡುತ್ತೇನೆ. ನಾನು ದಿನಾಲೂ ಬೆಳಗ್ಗೆ*10* ಗಂಟೆಯಿಂದ ಸಂಜೆ *6* ಗಂಟೆವರೆಗೆ ಫ್ರೂಟ್ಸ್ ವ್ಯಾಪಾರ ಮಾಡುತ್ತೇನೆ. ಚಾಸಾ-*8* ಮಹದೇವು ಸಹ ನನ್ನ ಪಕ್ಕದ ಅಂಗಡಿಯಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಾರೆ. ಕೋರ್ಟ್ ಮುಂದೆ ಇರುವ ಆರೋಪಿತ ರೆಹಮಾನ್ ಷರೀಫ್ ಸಹ ಅದೇ ಸ್ಥಳದಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಾನೆ. ಆರೋಪಿ ದಿನಾಲೂ ಸಂಜೆ ತನ್ನ ತಳ್ಳುವ ಗಾಡಿಯನ್ನು ಪಾರ್ಕ್ ಪಕ್ಕದಲ್ಲಿರುವ ನಾಗರತ್ನ ಇವರ ಮನೆ ಕಾಪೌಂಡ್ ಒಳಗಡೆ ನಿಲ್ಲಿಸಿ ಹೊಗುತ್ತಿದ್ದ. ದಿಃ*21.08.2019* ರಂದು ನಾಗರತ್ನ ಮನೆಯಲ್ಲಿ ಕಳ್ಳತನವಾಗಿದೆ ಎಂದು ಪೊಲೀಸರು

ಹೇಳಿದಾಗ ಗೊತ್ತಾಗಿತ್ತು. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಆ ಕಾಲಕ್ಕೆ ಆರೋಪಿ ರೆಹಮಾನ್ ಷರೀಫ್ ಕಳ್ಳತನ ಮಾಡಿದ್ದಾರೆ ಎಂದು ಹೇಳಿದ್ದರು.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಕೆ.ಎಂ ರವರಿಂದಃ-</u>

*2.* ಅಲ್ಲಿ ನಾನು, ಮಹದೇವು ಮತ್ತು ಆರೋಪಿ ರೆಹಮಾನ್ ಮೂರೇ ಜನ ಹಣ್ಣಿನ ವ್ಯಾಪಾರ ಮಾಡುತ್ತೇವೆ. ದಿಃ*21.08.2019* ರಂದು ಆ ಘಟನೆ ನಡೆದಿದೆ. ಆ ದಿನವೂ ಸಹ ನಾನು ಬೆಳಗ್ಗೆ *10* ಗಂಟೆಗೆ ನನ್ನ ಅಂಗಡಿ ಬಳಿ ಬಂದಿದ್ದೆ. ನಾಗರತ್ನ ಇವರ ಪರಿಚಯ ನನಗೆ ಇರಲಿಲ್ಲ. ಪೊಲೀಸರು ಹೇಳಿದ್ದರಿಂದ ಅವರ ಹೆಸರು ನನಗೆ ಗೊತ್ತಾಗಿದೆ. ಆ ನಾಗರತ್ನ ಇವರ ಮನೆಯಲ್ಲಿ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಅಕ್ಕಪಕ್ಕದವರು ಮತ್ತು ಪೊಲೀಸರು ಹೇಳಿದ್ದರಿಂದ ಆರೋಪಿತನೇ ಕಳ್ಳತನ ಮಾಡಿದ್ದಾನೆ ಎಂದು ಗೊತ್ತಾಗಿತ್ತು. ಆ ಘಟನೆ ನಡೆದಾಗ ನಾನು ಆ ಸ್ಥಳದಲ್ಲಿ ಇರಲಿಲ್ಲ. ಘಟನೆ ದಿನವೇ ಪೋಲೀಸ್ ಠಾಣೆಯಲ್ಲಿ ಬೆಳಗ್ಗೆ *11-12* ಗಂಟೆಗೆ ನನ್ನ ಹೇಳಿಕೆ ಪಡೆದಿದ್ದಾರೆ. ಆ ಕಾಲಕ್ಕೆ ಚಾ.ಸಾ-*8* ಸಹ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದಾರೆ. ಆ ಕಾಲಕ್ಕೆ ಹೇಳಿಕೆಯನ್ನು ಟೈಪ್ ಮಾಡಿ ನನ್ನ ಸಹಿ ಪಡೆದಿದ್ದಾರೆ. ನಾನು ಅದನ್ನು ನೋಡಿ ಸಹಿ ಮಾಡಿದ್ದೇನೆ. ನನಗೆ ಓದಲು ಬರುವುದಿಲ್ಲ ಆದ್ದರಿಂದ ಅದರಲ್ಲಿ ಏನು ಬರೆದಿತ್ತು ಎಂದು ಗೊತ್ತಿಲ್ಲ.

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು